ಓ.ಎಸ್.151/2022 ಡಿ.ಡಬ್ಲು-1
*ಹುಲ್ಲಪ್ಪ @ ಹುಲಗಪ್ಪ ತಂದೆ ಗ್ಯಾನಪ್ಪ*

ದಿ.03-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಎನ್.ವಿ.ಜಿ ವಕೀಲರಿಂದ:-**

ಸರ್ವೆ ನಂ: ೬೦೬ ರ ಜಮೀನು ಇಂತದೆ ಚೆಕ್ಕಬಂದಿ ಬರುತ್ತದೆ ಎಂದು ತೋರಿಸಲು ದಾಖಲೆಗಳು ಹಾಜರುಪಡಿಸಿರುವುದಿಲ್ಲ. ಮಠದ ಪಕ್ಕದಲ್ಲಿ ನಮ್ಮದು ಯಾವುದೇ ಜಮೀನು ಇರದೆ ಇದ್ದರೂ ಸಹ ವಾದಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ನಮ್ಮ ಜಮೀನು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಜಮೀನು ಮಂಜೂರಾದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಮ್ಮ ಅಜ್ಜಿಗೆ ಜಮೀನು ಹೇಗೆ ಬಂದಿದೆ ಎಂದು ನಮಗೆ ಮಾಹಿತಿ ಇಲ್ಲ. ನಮ್ಮ ತಂದೆ ಗ್ಯಾನಪ್ಪ ಹೊಲ ನಮ್ಮದೆ ಇದೆ ಎಂದು ಕೇಸು ಕೊಟ್ಟಿರುತ್ತಾರೆ. ನಮ್ಮ ತಂದೆಯ ಜೊತೆ ನಾನು ವಕೀಲರ ಹತ್ತಿರ ಹೋಗಿರುವುದಿಲ್ಲ. ನಮ್ಮ ತಂಧೆಯವರು ಏನು ಮಾಹಿತಿ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಯ ಮಠಕ್ಕೆ ಸಂಬಂಧೀಸಿದೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.